



# ಬರಲಿದೆ... ಬಿಡುಗಡೆ ಆಗದ ಚಿತ್ರಗಳು!

★ ಪ್ರಕಾಶ್ ಶೆಟ್ಟಿ

## ಕಾವಲುಗಾರ

ಗ್ರಾಹುಲ್ ಗಾಂಧಿ ನಿರ್ದೇಶನದಲ್ಲಿ ನಿದ್ರಾಮಯ್ಯ ನಿರ್ದೇಶಿಸಿದ ಚಿತ್ರ. ದೇಶದ ಪ್ರಧಾನಿಯನ್ನು ಅಪಹಾಸ್ಯ ಮಾಡಿರುವುದರಿಂದ ಈ ವಿವಾದಾತ್ಮಕ ಚಿತ್ರಕ್ಕೆ ಸೆನ್ಸಾರ್ ಮಂಡಳಿಯಿಂದ ಓಕೆ ಸಿಗುವುದು ಕಷ್ಟ. ಸಿಕ್ಕಿದರೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಥಿಯೇಟರ್‌ಗೆ ಬರುವುದು ಅನುಮಾನ ಎಂದು ಶೇಷವ ಶಿಲ್ಪದ ವಿಮರ್ಶಕರು ಬಿಡುಗಡೆಗೆ ಮುನ್ನವೇ ಚಿತ್ರವಿಮರ್ಶೆ ಬರೆದು ಕರಪತ್ರಗಳನ್ನು ಹಂಚುತ್ತಿದ್ದಾರೆ.



## ಅಂತರ ಅನಂತರ

ಬಾಯಿ ತೆರೆದರೆ ವಿಷ ಕಾರುವ ರಾಜಕೀಯ ನಾಯಕನೊಬ್ಬನ ಸುತ್ತ ಬರೀ ಹೇಳಿಕೆಗಳಿಂದಲೇ ಹೆಣೆದ ಕತೆ. ಒಂದು ದೃಶ್ಯದಲ್ಲಂತೂ 15 ನಿಮಿಷಗಳ ಸುದೀರ್ಘ ಭಾಷಣವನ್ನು ಹೀರೋ ಒಂದೇ ಉಸಿರಿನಲ್ಲಿ ಮಾಡಿದ್ದಾರಂತೆ. ಚಿತ್ರದ ನಾಯಕನಿಗೂ ಕೇಂದ್ರದ ಸಚಿವರೊಬ್ಬರಿಗೂ ಹೋಲಿಕೆ ಇದೆಯೆಂದು ಅಖಿಲ ಭಾರತ ವಿಚಾರವಾದಿಗಳ ಕೂಟ, ಚಿತ್ರ ಬಿಡುಗಡೆ ಆಗದಿದ್ದರೂ ಬೀದಿಗಿಳಿಯಲು ತಯಾರಿ ನಡೆಸಿದೆಯಂತೆ. ದೆಹಲಿಯಿಂದಲೇ ಭಲೇಂದ್ರ ಮೋದಿ ಈ ಚಿತ್ರವನ್ನು ಟ್ವಿಟ್ಟರ್ ಮೂಲಕ ನಿರ್ದೇಶಿಸಿದ್ದು ಹೊಸ ದಾಖಲೆ ಎಂದು ನಿರ್ದೇಸಖ ಭಾಜಪ್ಪ ತಿಳಿಸಿದ್ದಾರೆ.



